[redacted]

# ಹರೀಶ್ ಸಾಳ್ವೆ: ಎರಡನೇ ಬಾಳ್ವೆ

[redacted]



[redacted]

ಭಾರತದ ಅತ್ಯಂತ ದುಬಾರಿ 'ಟಾಪ್ 3' ವಕೀಲರಲ್ಲಿ ಒಬ್ಬರಾಗಿರುವ ಹರೀಶ್ ಸಾಳ್ವೆ ಕಳೆದ ವಾರ ಲಂಡನ್ನಿನ ಚರ್ಚ್ ಒಂದರಲ್ಲಿ ಬ್ರಿಟನ್ ಸಂಜಾತೆ, ಕಲಾವಿದೆ ಕ್ಯಾರೊಲಿನ್ ಬ್ರೊಸಾರ್ಡ್ ಅವರನ್ನು ಮದುವೆಯಾದರು. ಅವರ 65ರ ಇಳಿವಯಸ್ಸಿನ ಈ ಮದುವೆ ದೊಡ್ಡ ಸುದ್ದಿಯಾಗಿದೆ. ಮದುಮಗಳು ಕ್ಯಾರೊಲಿನ್‌ರಿಗೆ 56 ವರ್ಷ. ಇಬ್ಬರ ಪರಿಚಯವಾದದ್ದು ಒಂದು ವರ್ಷದ ಹಿಂದೆ. ಇಬ್ಬರ ಮಧ್ಯೆ ರಂಗಭೂಮಿ, ಶಾಸ್ತ್ರೀಯ ಸಂಗೀತ ಮತ್ತು ಕಲೆಯ ಅಭಿರುಚಿ ಸಮಾನವಾಗಿದೆಯಂತೆ. ಕ್ಯಾರೊಲಿನ್‌ರಿಗೂ ಇದು ಎರಡನೇ ಮದುವೆ. ಮೊದಲ ಗಂಡನಿಂದ 18 ವರ್ಷದ ಮಗಳಿದ್ದಾಳೆ. ಪ್ರೇಮ ಅರಳುವುದಕ್ಕೆ ವಯಸ್ಸಿನ ಹಂಗಿಲ್ಲವಲ್ಲ? ಮದುವೆಯಲ್ಲಿ ಹಾಜರಿದ್ದವರು ಹದಿನೈದು ಜನ. ಅದು ಸದ್ಯಕ್ಕೆ ಅಲ್ಲಿನ ಕೊರೊನಾ ನಿಯಮ.

ಹರೀಶ್ ಸಾಳ್ವೆ ಅವರ ಮೊದಲ ಪತ್ನಿ ಮೀನಾಕ್ಷಿ ಸಾಳ್ವೆ. ಕಳೆದ ಜೂನ್‌ನಲ್ಲಿ ಮೀನಾಕ್ಷಿ ಮತ್ತು ಹರೀಶ್ ನಡುವಣ ಡೈವೋರ್ಸ್ ಅರ್ಜಿ ಲಂಡನ್ ಕೋರ್ಟಿನಲ್ಲೇ ಇತ್ಯರ್ಥವಾಗಿದೆ. ಅವರದ್ದು 38 ವರ್ಷಗಳ ದಾಂಪತ್ಯ. ಇತ್ತೀಚೆಗೆ ಮೀನಾಕ್ಷಿ ದೆಹಲಿಯಲ್ಲಿದ್ದರೆ, ಹರೀಶ್ ಲಂಡನ್ನಿನಲ್ಲೇ ಇರುತ್ತಿದ್ದರು. 'ಇಬ್ಬರ ಮಧ್ಯೆ ಬಗೆಹರಿಸಲಾಗದ ಸಮಸ್ಯೆಗಳಿದ್ದವು. ಹಾಗಾಗಿ ಡೈವೋರ್ಸ್ ಬಿಟ್ಟು ಬೇರೆ ದಾರಿ ಇರಲಿಲ್ಲ' ಎಂದಿದ್ದಾರೆ ಸಾಳ್ವೆ. ವಕೀಲರಾಗಿ ಹಲವು ಕ್ಲಿಷ್ಟ ಉದ್ಯಮ ವ್ಯಾಜ್ಯಗಳನ್ನು ಬಗೆಹರಿಸಿರುವ ಸಾಳ್ವೆ ಅವರಿಗೆ ತಮ್ಮ ಪತ್ನಿಯ ಜೊತೆಗಿನ ವ್ಯಾಜ್ಯವನ್ನು ರಾಜಿಯಲ್ಲಿ ಬಗೆಹರಿಸಿಕೊಳ್ಳಲು ಆಗಲಿಲ್ಲ.

ಸಾಳ್ವೆ ಅವರಿಗೆ ಮೊದಲ ಪತ್ನಿಯಿಂದ ಇಬ್ಬರು ಮಕ್ಕಳಿದ್ದಾರೆ. ಇಬ್ಬರೂ ದೆಹಲಿಯಲ್ಲಿ ನೆಲೆಸಿದ್ದಾರೆ. ಸಾಕ್ಷಿ (37) ಮತ್ತು ಸಾನಿಯಾ (33). ಸಾನಿಯಾ ಶೀಘ್ರವೇ ತಾಯಿ ಆಗಲಿದ್ದಾರಂತೆ. ಸಾನಿಯಾ 2014ರಲ್ಲಿ ಅರ್ಮಾನ್ ಸಿದ್ದಿಕ್ ರನ್ನು ಗೋವಾದಲ್ಲಿ ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾಗಿದ್ದರು. ಅದನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತರೊಬ್ಬರು ಆಗ ಕೋರ್ಟಿಗೆ ಪಿಐಎಲ್ ಹಾಕಿದ್ದರು. 'ಗೋವಾದಲ್ಲಿ ವಿಶೇಷ ವಿವಾಹ ಕಾಯ್ದೆ ಇಲ್ಲ, ಏಕರೂಪದ ನಾಗರಿಕ ಕಾಯ್ದೆ ಇದೆ. ಹಾಗಾಗಿ ಮದುವೆ ಅನೂರ್ಜಿತ' ಎನ್ನುವುದು ಅರ್ಜಿದಾರರ ವಾದವಾಗಿತ್ತು. ಆದರೆ ಆ ಮದುವೆಗೆ ಒಂದು ತಿಂಗಳ ಮುಂಚೆ ಗೋವಾ ಸರಕಾರ ವಿಶೇಷ ಗಜೆಟ್ ನೋಟಿಫಿಕೇಶನ್ ಮೂಲಕ ವಿಶೇಷ ವಿವಾಹ ಕಾಯ್ದೆಯನ್ನು ಜಾರಿಗೊಳಿಸಿತ್ತು. ಹರೀಶ್ ಸಾಳ್ವೆ ಎರಡು ವರ್ಷಗಳ ಹಿಂದೆಯೇ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ್ದಾರೆ. ನಿಯಮಿತವಾಗಿ ಚರ್ಚ್‌ಗೂ ಹೋಗಿಬರುತ್ತಿದ್ದಾರೆ.

ಮಹಾರಾಷ್ಟ್ರದ ಹಿರಿಯ ಕಾಂಗ್ರೆಸ್ ಮುಖಂಡ ಎನ್.ಕೆ.ಪಿ. ಸಾಳ್ವೆ ಅವರ ಮಗ ಈ ಹರೀಶ್. ನಾಗಪುರದಲ್ಲಿ ಹುಟ್ಟಿ, ಎಲ್‌ಎಲ್‌ಬಿ ಪದವಿ ಪಡೆದದ್ದೂ ಅಲ್ಲೇ. ಅಪ್ಪ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್. ತಾಯಿ ವೈದ್ಯೆ. ಹರೀಶ್ ಅಜ್ಜ ಪಿ.ಕೆ.ಸಾಳ್ವೆ ಖ್ಯಾತ ಕ್ರಿಮಿನಲ್ ಲಾಯರ್ ಆಗಿದ್ದರು. ಮೊಮ್ಮಗ ಅಜ್ಜನ ಹಾದಿ ಹಿಡಿದ. 1992ರಲ್ಲಿ ದೆಹಲಿ ಹೈಕೋರ್ಟ್‌ನಲ್ಲಿ ವಕಾಲತ್ತು ಶುರು ಮಾಡಿದ ಹರೀಶ್ ಸಾಳ್ವೆ ಮುಂದೆ ನಾನಿ ಪಾಲ್ಖಿವಾಲಾ, ಸೊಲಿ ಸೊರಾಬ್ಜಿ ಮುಂತಾದ ಪ್ರಖ್ಯಾತರ ಜೊತೆಗೆ ಕೆಲಸ ಮಾಡಿದವರು. ಭಾರತ ಸರಕಾರದ ಸಾಲಿಸಿಟರ್ ಜನರಲ್ (1999–2002) ಆದರು. 'ಪದ್ಮಭೂಷಣ' ಪಡೆದರು.

ಈಗಂತೂ 'ಸಾಳ್ವೆ ಕೇಸ್ ತಗೊಂಡರೆ ನಮ್ಮ ಪುಣ್ಯ' ಎನ್ನುವವರ ಸಂಖ್ಯೆ ದೊಡ್ಡದಿದೆ. ದಿನಕ್ಕೆ 90 ಕೋಟಿ ದುಡಿಯುತ್ತಿರುವ ಮುಖೇಶ್ ಅಂಬಾನಿ ಇವರ ಕಕ್ಷಿದಾರ. ರತನ್ ಟಾಟಾ ಮತ್ತು ಸೈರಸ್ ಮಿಸ್ತ್ರಿ ನಡುವಣ ವಿವಾದದಲ್ಲಿ ಟಾಟಾಗೆ ಇವರೇ ವಕೀಲರು. ಸಲ್ಮಾನ್ ಖಾನ್ 'ಹಿಟ್ ಅಂಡ್ ರನ್' ಕೇಸ್‌ನಿಂದ ಬಚಾವಾಗಲು ನೆರವಾದದ್ದು ಇವರೇ. ಫೇಸ್‌ಬುಕ್ ಉಪಾಧ್ಯಕ್ಷ ಮತ್ತು ದೆಹಲಿ ಅಸೆಂಬ್ಲಿ ನಡುವಣ ಕೇಸ್‌ನಲ್ಲಿ ಫೇಸ್‌ಬುಕ್ ಪರ. ಮಹಾರಾಷ್ಟ್ರ ಸರಕಾರದ ವಿರುದ್ಧ ಅರ್ನಾಬ್ ಗೋಸ್ವಾಮಿಗೂ ಇವರೇ ವಕೀಲ. ಲಂಡನ್ನಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ವಾದ. 'ನ್ಯಾಯಾಧೀಶರ ಬಾಡಿ ಲ್ಯಾಂಗ್ವೇಜ್ ಅರಿತುಕೊಳ್ಳುವುದೂ ಮುಖ್ಯ. ಅಂತಹ ಸಂದರ್ಭ ಇದ್ದಾಗ ಖುದ್ದಾಗಿ ಹಾಜರಿರುವೆ' ಎಂದು ಸಾಳ್ವೆ ಸಂದರ್ಶನವೊಂದರಲ್ಲಿ ಹೇಳಿದ್ದುಂಟು.

2013ರಲ್ಲಿ ಲಂಡನ್ ಬಾರ್ ಕೌನ್ಸಿಲ್‌ನಲ್ಲಿ ಪ್ರಾಕ್ಟೀಸ್ ಶುರು. ಈ ವರ್ಷದ ಆರಂಭದಲ್ಲಿ ಲಂಡನ್ನಿನ ಕ್ವೀನ್ಸ್ ಕೌನ್ಸಿಲ್ ಸದಸ್ಯತ್ವ. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಕಗ್ಗಂಟಾಗಿ ಕುಳಿತಿರುವ ಕುಲಭೂಷಣ್ ಜಾಧವ್ ಕೇಸ್ ಕೂಡಾ ಇವರದ್ದೇ. ಈ ಕೇಸ್‌ಗೆ ಹರೀಶ್ ಶುಲ್ಕ– ಕೇವಲ ಒಂದು ರೂಪಾಯಿ.

ಭಾರತದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಶರದ್ ಬೊಬ್ಡೆ ಹರೀಶರ ಕಾಲೇಜ್‌ಮೇಟ್. ಬೊಬ್ಡೆ ಅವರದ್ದೂ ಸೇರಿ, ಐದು ಮುಖ್ಯ ನ್ಯಾಯಾಧೀಶರ ಪ್ರಮಾಣ ವಚನ ಸಮಾರಂಭದಲ್ಲಿಯೂ ಹರೀಶ್ ಭಾಗವಹಿಸಿದ್ದಾರೆ. ಕಾಶ್ಮೀರದಲ್ಲಿ ಆರ್ಟಿಕಲ್ 370 ರದ್ದತಿ ಮತ್ತು ಬಾಬ್ರಿ ಮಸೀದಿಯ ತೀರ್ಪಿನ ಪರ ಇದ್ದವರು. ಹಾಗೆಂದು ಬಲಪಂಥೀಯ ಅನ್ನುವಂತಿಲ್ಲ. ಬಾಬ್ರಿ ಮಸೀದಿ ಪ್ರಕರಣದಲ್ಲಿ ಹಿಂದೂ ಪರ ಒಂದು ಗುಂಪಿನ ವಕಾಲತ್ತಿಗೆ ಇವರು ಒಪ್ಪಿರಲಿಲ್ಲ. 2003ರಲ್ಲಿ ಗುಜರಾತ್ ಗಲಭೆಯಲ್ಲಿ ನೊಂದ ಬಿಲ್ಕೀಸ್ ಬಾನೊ ಪರ ಕೇಸ್ ಗೆದ್ದು ಕೊಟ್ಟವರು. ಆರುಶಿ–ಹೇಮರಾಜ್ ಡಬಲ್ ಮರ್ಡರ್ ಕೇಸಲ್ಲಿ ಆರೋಪಿಗಳ ಪರ. ವೊಡಾಫೋನ್ ಪರವಾಗಿ 2 ಶತಕೋಟಿ ಡಾಲರ್ ಪರಿಹಾರದ ತೆರಿಗೆ ಕೇಸ್‌ನಲ್ಲಿ ವಾದಿಸಿದವರು. ನರ್ಮದಾ ಬಚಾವೊ ಆಂದೋಲನದಲ್ಲಿ ಗುಜರಾತ್ ಸರಕಾರದ ಪರ. ಸಾಳ್ವೆಗೆ ಅವರೇ ಸಾಟಿ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65